ಪ್ರ-330
ಕ್ರ-84

# ಕರ್ನಾಟಕ ವಿಧಾನ ಪರಿಷತ್

## 146 ನೇ ಮುಂದುವರೆದ ಅಧಿವೇಶನ-2022

| ನಿಯಮ-330ರಡಿಯ ಸೂಚನೆ | |
|---|---|
| ಸೂಚನೆ ನೀಡಿದ ಸದಸ್ಯರ ಹೆಸರು | ಶ್ರೀ ವೈ.ಎ.ನಾರಾಯಣಸ್ವಾಮಿ, ವಿಧಾನಪರಿಷತ್ತಿನ ಮಾನ್ಯ ಸದಸ್ಯರು(ಶಿಕ್ಷಕರ ಕ್ಷೇತ್ರ) |

## ಸೂಚನೆಯ ವಿಷಯ

*ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇತ್ತೀಚಿಗೆ ಅಂಕಪಟ್ಟಿ ಹಗರಣಗಳು, ಅಂಕಪಟ್ಟಿಯಲ್ಲಿನ ದೋಷಗಳು, ನಿಗದಿತ ಸಮಯದಲ್ಲಿ ಫಲಿತಾಂಶ ಮಾಡದಿರಲು, ಮೌಲ್ಯಮಾಪನವನ್ನು ಬರೀ ಅತಿಥಿ ಉಪನ್ಯಾಸಕರಿಂದ ಮಾಡಿಸುತ್ತಿರುವುದರಿಂದ ಮೇಲ್ಕಂಡ ವಿಶ್ವವಿದ್ಯಾಲಯದ ಬಗ್ಗೆ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಪದವಿ ಪತ್ರಕ್ಕೆ ಗೌರವ ಸಿಗದೇ ಇರುವ ಮತ್ತು ವಿದಾರ್ಥಿಗಳು ವಿಶ್ವವಿದ್ಯಾಲಯದ ಬಗ್ಗೆ ಭರವಸೆ ಕಳೆದುಕೊಳ್ಳುತ್ತಿರುವ ಬಗ್ಗೆ*

## ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಹೇಳಿಕೆ

ಕೋವಿಡ್ ಮಾರಕ ರೋಗದ ಪ್ರಸರಣೆಯ ಕಾರಣದಿಂದ ಲಾಕ್‌ಡೌನ್ ಹಾಗೂ ರಜೆ ಘೋಷಿಸಲಾದ ಕಾರಣ 2021ನೇ ಸಾಲಿನ ಅವಧಿಯ 5 ನೇ ಸೆಮಿಸ್ಟರ್ ಪರೀಕ್ಷೆಗಳನ್ನು 18.03.2021 ರಿಂದ 07.04.2021ರವರೆಗೆ, 1ನೇ ಮತ್ತು 3ನೇ ಸೆಮಿಸ್ಟರ್ ಪರೀಕ್ಷೆಗಳನ್ನು ದಿನಾಂಕ:10.08.2021 ರಿಂದ ದಿನಾಂಕ:04.09.2021 ರವರೆಗೆ ಹಾಗೂ 2ನೇ, 4ನೇ ಮತ್ತು 6ನೇ ಸೆಮಿಸ್ಟರ್ ಪರೀಕ್ಷೆಗಳನ್ನು ದಿನಾಂಕ:29.09.2021 ರಿಂದ ದಿನಾಂಕ:30.10.2021 ರವರೆಗೆ ನಡೆಸಿ, ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಫಲಿತಾಂಶಗಳನ್ನು ನಿಗದಿತ ಕಾಲಮಿತಿಯೊಳಗಾಗಿ ಪ್ರಕಟಿಸಲಾಗಿದೆ.

ಮುಕ್ತ ಹಾಗೂ ದೂರ ಶಿಕ್ಷಣದ ಸ್ನಾತ್ತಕ ಕೋರ್ಸುಗಳ ಪರೀಕ್ಷೆಗಳ ಮೌಲ್ಯಮಾಪನವನ್ನು ಲಾಕ್‌ಡೌನ ಅವಧಿ ಮುಕ್ತಾಯಗೊಂಡ ನಂತರ ನಡೆಸಿ, ಫಲಿತಾಂಶಗಳನ್ನು ಕಾಲಬದ್ಧವಾಗಿ ಪ್ರಕಟಿಸಲಾಗಿದೆ. ಆದರೆ, ಸ್ನಾತ್ತಕೋತ್ತರ ಪದವಿ ಪರೀಕ್ಷೆಗಳನ್ನು ಬೆಂಗಳೂರು ವಿಶ್ವವಿದ್ಯಾಲಯದ ವಿನಿಯಮಗಳ ಪ್ರಕಾರ ಇಬ್ಬರು ಮೌಲ್ಯಮಾಪಕರಿಂದ ದ್ವಿ-ಮೌಲ್ಯಮಾಪನಕ್ಕೆ(Double Valuation) ಒಳಪಡಿಸಬೇಕಾಗುತ್ತದೆ. ಕೋವಿಡ್ ಪ್ರಸರಣೆ ಹಾಗೂ ಇತರೆ ಅನಿವಾರ್ಯ ಕಾರಣಗಳಿಂದಾಗಿ ಎದುರಾದ ಹತೋಟಿಗೆ ಮೀರಿದ ಸನ್ನಿವೇಶಗಳಿಂದಾಗಿ ಅನ್ಯ ವಿಶ್ವವಿದ್ಯಾಲಯಗಳ ಮೌಲ್ಯಮಾಪಕರು ಮೌಲ್ಯಮಾಪನ ಪ್ರಕ್ರಿಯೆಲ್ಲಿ ತೊಡಗಿಸಿಕೊಳ್ಳಲು ತಡವಾದ ಹಿನ್ನೆಲೆಯಲ್ಲಿ ಫಲಿತಾಂಶ ಪ್ರಕಟಿಸಲು ಅಲ್ಪ ವಿಳಂಬವಾಗಿದ್ದರೂ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗೆ ಭಾದಕವಾಗದಂತೆ ವಿಶ್ವವಿದ್ಯಾಲಯದಿಂದ ಕ್ರಮವಹಿಸಲಾಗಿದೆ.

ವಿದ್ಯಾರ್ಥಿಗಳ ವಿವರಗಳನ್ನು ಅಪ್‌ಲೋಡ್ ಮಾಡುವ ಸಂದರ್ಭದಲ್ಲಿ ಪ್ರಮಾದವಶಾತ್ ಹಾಗೂ ಕಣ್ತಪ್ಪಿನಿಂದ ನೋಂದಣಿ ಸಂಖ್ಯೆ ಹಾಗೂ ಇತರೆ ಕೆಲವು ವಿಷಯಗಳ ನಮೂದನೆಗಳಲ್ಲಿ ಉಂಟಾದ ಉದ್ದೇಶಪೂರ್ವಕವಲ್ಲದ ಲೋಪಗಳನ್ನು ಕೂಡಲೇ ಸರಿಪಡಿಸಿ, ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಫಲಿತಾಂಶಗಳನ್ನು ಪ್ರಕಟಿಸಿ, ಅಂಕಪಟ್ಟಿಗಳನ್ನು ವಿತರಿಸಲಾಗಿದೆ. ಕೋವಿಡ್-19 ಪ್ರಸರಣೆಯಿಂದಾಗಿ ಎದುರಾದ ಆರ್ಥಿಕ ವಿಷಮ ಪರಿಸ್ಥಿತಿಯನ್ನು

--2

ಸುಸ್ಥಿತಿಗೆ ತರಲು ಮಿತವ್ಯಯ ಆದೇಶ ಜಾರಿಯಲ್ಲಿದ್ದ ಹಿನ್ನೆಲೆಯಲ್ಲಿ ನೇರ ನೇಮಕಾತಿಗಳನ್ನು ತಡೆಹಿಡಿಯಲಾಗಿದ್ದ ಕಾರಣ ಖಾಲಿ ಇದ್ದ ಹುದ್ದೆಗಳ ಎದುರಾಗಿ ಪರಿಣಿತ ಅತಿಥಿ ಉಪನ್ಯಾಸಕರ ಸೇವೆಯನ್ನು ಅಗತ್ಯತೆ ಅನುಗುಣವಾಗಿ ನಿಯಮಾನುಸಾರ ಪಡೆಯಲಾಗಿದೆ. ಶಿಕ್ಷಣದ ಗುಣಮಟ್ಟದೊಂದಿಗೆ ರಾಜೀಯಾಗದಂತೆ ಖಾಯಂ ಬೋಧಕರು ಹಾಗೂ ಅಥಿತಿ ಉಪನ್ಯಾಸಕರಿಂದ ಬೋಧನಾ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಘನತೆ ಹಾಗೂ ವಿಶ್ವವಿದ್ಯಾಲಯದ ಸಂಬಂಧದಲ್ಲಿ ವಿದ್ಯಾರ್ಥಿಗಳು ಹೊಂದಿರುವ ಭರವಸೆಗೆ ಚ್ಯುತಿಯಾಗದಂತೆ ಬೋಧನೆ, ಸಂಶೋಧನೆ ಹಾಗೂ ಇತರೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

---

**(ಡಾ || ಅಶ್ವತ್ಥ ನಾರಾಯಣ ಸಿ.ಎನ್.)**
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ,
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

**ಇಡಿ/155/ಯುಬಿವಿ/2022**